

# ಮಾಧುರಿಯ ಕ್ಯಾಂಡಲ್

ಕೋವಿಡ್ ಕಾಟದ ಮಧ್ಯೆಯೇ ಮಾಧುರಿ ದೀಕ್ಷಿತ್ ಮನೆಯಲ್ಲೇ ತಮ್ಮ ಹುಟ್ಟುಹಬ್ಬ ಆಚರಿಸಿದ್ದಾರೆ. ಜೊತೆಗೆ ತಮ್ಮ ಮೊದಲ ಹಾಡಿನ ವಿಡಿಯೊ ಹೊರತಂದಿದ್ದಾರೆ. ವಿಡಿಯೊ ಹೆಸರು ಕ್ಯಾಂಡಲ್. ಮೇಣದ ಬತ್ತಿ ಹೇಗೆ ಉರಿದು ಪ್ರಶಾಂತ ಬೆಳಕನ್ನು ನೀಡುತ್ತದೆಯೋ ಹಾಗೆ ಈ ಹಾಡು ಕೋವಿಡ್‌ನಿಂದ ಬಳಲಿರುವ ಕಲಾಪ್ರೇಮಿಗಳಿಗೆ ಸಾಂತ್ವನ ಹೇಳುತ್ತದೆ ಎನ್ನುವುದು ಮಾಧುರಿ ಅನಿಸಿಕೆ. ಇಂಗ್ಲಿಷ್‌ನಲ್ಲಿರುವ ಈ ಹಾಡು ಈಗಾಗಲೇ ಜಾಲತಾಣಗಳಲ್ಲಿ ಜನಪ್ರಿಯವಾಗಿದೆ.

ಕಳೆದ ಮೂರು ತಿಂಗಳಿಂದ ಮನೆಯಲ್ಲೇ ಕುರಿತು ಜಾಲತಾಣದಲ್ಲಿ ಚಟುವಟಿಕೆಯಿಂದ ಇರುವ ಮಾಧುರಿ, ಲಾಕ್‌ಡೌನ್ ತೆರವಾದ ತಕ್ಷಣ ತಮ್ಮ ಟಿವಿ ರಿಯಾಲಿಟಿ ಷೋ 'ಡಾನ್ಸ್ ದೀವಾನೆ' ಶೂಟಿಂಗ್ ಮುಂದುವರಿಸಲು ಕಾತುರರಾಗಿದ್ದಾರೆ. ಜೊತೆಗೆ ನೆಟ್‌ಫ್ಲಿಕ್ಸ್ ಸಲುವಾಗಿ ಅವರು ಕೈಗೆತ್ತಿಕೊಂಡಿರುವ ಯೋಜನೆಗಳು ಮುಂದುವರಿಯಲಿವೆ.

ಈ ಮಧ್ಯೆ 'ಖಳನಾಯಕ್' ಹಿಂದಿ ಸಿನಿಮಾದ ಎರಡನೇ ಭಾಗ ಬರಲಿದೆ ಎನ್ನುವ ಸುದ್ದಿ ಹಬ್ಬಿದೆ. ಸಂಜಯ್ ದತ್ ಮತ್ತು ಮಾಧುರಿ ಅಭಿನಯಿಸಿದ 1993ರ ಸೂಪರ್‌ಹಿಟ್ ಸಿನಿಮಾವದು. ಅದರಲ್ಲಿ ಮಾಧುರಿ ನೃತ್ಯದ 'ಚೋಲೀ ಕೆ ಪೀಚೇ ಕ್ಯಾ ಹೈ' ಹಾಡು ಸಾಕಷ್ಟು ಸುದ್ದಿ ಮಾಡಿತ್ತು. ಆದರೆ ಸಿನಿಮಾದ ಎರಡನೇ ಭಾಗದ ಬಗ್ಗೆ ಬಗ್ಗೆ ಮಾಧುರಿಗೆ ಇನ್ನೂ ಸುದ್ದಿ ಬಂದಿಲ್ಲವಂತೆ. 'ನೋಡೋಣ, ನನಗೂ ಇದು ಹೊಸ ಸುದ್ದಿ' ಎಂದಿದ್ದಾರೆ ಮಾಧುರಿ.

ಕಳೆದ ವರ್ಷ ಮಾಧುರಿ ಎರಡು ಮರಾಠಿ ಸಿನಿಮಾಗಳನ್ನು ನಿರ್ಮಿಸಿದ್ದರು. '15 ಆಗಸ್ಟ್' ಮತ್ತು 'ಪಂಚಕ್' ಎರಡೂ ನಿರ್ಮಾಪಕಿಯಾಗಿ ಸಾಕಷ್ಟು ಕೀರ್ತಿ ತಂದುಕೊಟ್ಟವು. ಮತ್ತೆ ಸಿನಿಮಾ ನಿರ್ಮಿಸುವುದರ ಬಗ್ಗೆ ಮಾಧುರಿ ಸ್ಪಷ್ಟವಾಗಿ ಏನೂ ಹೇಳಿಲ್ಲ. 'ಯಾವುದಕ್ಕೂ ಈ ಕೋವಿಡ್ ಪರಿಸ್ಥಿತಿ ತಿಳಿಯಾಗಬೇಕಲ್ಲ. ಕೈಯಲ್ಲಿರುವ ಪ್ರಾಜೆಕ್ಟ್‌ಗಳನ್ನು ಮೊದಲು ಮುಗಿಸಬೇಕು. ಹೊಸ ಸಿನಿಮಾ ಆ ಬಳಿಕ' ಎನ್ನುವುದು ಮಾಧುರಿಯ ಮಾತು.

'ಈಗ ಕೋವಿಡ್ ಕಂಟಕ ಎಲ್ಲರಲ್ಲೂ ಚಿಂತೆ ಹೆಚ್ಚಿಸಿದೆ. ಜನರಲ್ಲಿ ಪಾಸಿಟಿವ್ ಮೂಡ್ ಸೃಷ್ಟಿಯಾಗಲೆಂದೇ ಕ್ಯಾಂಡಲ್ ಹಾಡು ಹೊರತಂದಿದ್ದೇನೆ. ಜನರ ಪ್ರತಿಕ್ರಿಯೆ ನೋಡಿಕೊಂಡು ಇನ್ನಷ್ಟು ಹಾಡುಗಳನ್ನು ಹಾಡುವೆ' ಎಂದಿದ್ದಾರೆ ಮಾಧುರಿ.

■ ಬಿಂದು

# ಪರಿಣೀತಿ ಸಂಭ್ರಮ

ಪರಿಣೀತಿ ಚೋಪ್ರಾ ಖುಷಿಯ ಮೂಡ್‌ನಲ್ಲಿದ್ದಾರೆ. 'ದಿ ಗರ್ಲ್ ಆನ್ ದಿ ಟ್ರೈನ್' ಇಂಗ್ಲಿಷ್ ಚಿತ್ರದ ಹಿಂದಿ ರಿಮೇಕ್ ಸಿದ್ಧವಾಗುತ್ತಿದೆ. ಚಿತ್ರದ ನಿರ್ದೇಶಕ ರಿಭು ದಾಸ್‌ಗುಪ್ತಾ ಬಗ್ಗೆ ಪರಿಣೀತಿ ಹೊಗಳಿಕೆಯ ಹೊನ್ನಮಳೆ ಸುರಿಸಿದ್ದಾರೆ. 'ಈವರೆಗೆ ನಾನು ಹಲವು ಚಿತ್ರಗಳಲ್ಲಿ ನಟಿಸಿದ್ದೇನೆ. ಆದರೆ ಅಭಿನಯದಲ್ಲಿ ನನ್ನ ನಿಜವಾದ ಸ್ಥಾನ ಏನು ಅನ್ನುವುದು ನನಗೆ ಈಗ ಗೊತ್ತಾಗಿದೆ. ಅದಕ್ಕೆ ಕಾರಣ ರಿಭು ದಾಸ್‌ಗುಪ್ತಾ. ಅವರು ವೃತ್ತಿಜೀವನಕ್ಕೆ ಹೊಸ ತಿರುವು ನೀಡಿದ್ದಾರೆ. ಅವರೊಬ್ಬ ಪರಿಪೂರ್ಣ ಗುರು. ಈ ಚಿತ್ರದ ಶೂಟಿಂಗ್‌ನಲ್ಲಿ ನಾನು ತುಂಬ ಹೊಸ ಪಾಠಗಳನ್ನು ಕಲಿತಿದ್ದೇನೆ' ಎಂದಿದ್ದಾರೆ ಪರಿಣೀತಿ. ಈ ಚಿತ್ರದಲ್ಲಿ ಪರಿಣೀತಿ ಜೊತೆಗೆ ಆದಿತಿ ರಾವ್ ಹೈದರಿ ಕೂಡಾ ಮುಖ್ಯ ಪಾತ್ರದಲ್ಲಿದ್ದಾರೆ.

ಈ ಮಧ್ಯೆ ಪರಿಣೀತಿ ನಟಿಸಿದ್ದ 'ಸಂದೀಪ್ ಔರ್ ಪಿಂಕಿ ಪರಾರ್' ಚಿತ್ರ ಬಿಡುಗಡೆಗೆ ಸಿದ್ಧವಾಗಿದೆಯಂತೆ. ದೀಪಂಕರ್ ಬ್ಯಾನರ್ಜಿ ಅವರ ಈ ಚಿತ್ರ 2018ರಲ್ಲೇ ಬಿಡುಗಡೆ ಆಗಬೇಕಿತ್ತು. ಈ ಸಲ ಇನ್ನೇನು ಬಿಡುಗಡೆ ಆಗಬೇಕು ಎನ್ನುವಾಗ ಕೊರೊನಾ ಸೋಂಕು ಹರಡಿತು.

'ದಿ ಗರ್ಲ್ ಆನ್ ದಿ ಟ್ರೈನ್' ಬಗ್ಗೆ ಪರಿಣೀತಿ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. 'ಶೂಟಿಂಗ್ ವೇಳೆ ನಾನು ಪೂರ್ತಿಯಾಗಿ ಪಾತ್ರದಲ್ಲಿ ತಲ್ಲೀನಳಾಗಿದ್ದೆ. ಎರಡು ತಿಂಗಳು ಯಾರ ಜೊತೆಗೂ ಸಂಪರ್ಕ ಕೂಡಾ ಇರಲಿಲ್ಲ. ಈ ಚಿತ್ರ ಅಭಿನಯದ ಕುರಿತ ನನ್ನ ಧೋರಣೆಯನ್ನು ಬದಲಿಸಿದೆ' ಎಂದಿದ್ದಾರೆ ಪರಿಣೀತಿ.

■

